6. ಅಧ್ಯಕ್ಷರ ಅಪ್ಪಣೆ ಮೇರೆಗೆ

2000ನೇ ಸಾಲಿನ ಕರ್ನಾಟಕ ಪಶ್ವವಿದ್ಯಾನಿಲಯಗಳ ವಿಧೇಯಕವನ್ನು ಜಂಟಿ ಪರಿಶೀಲನಾ ಸಮಿತಿಯು ವರದಿ ಮಾಡಿರುವಂತೆ ಸದನದಲ್ಲಿ ಮಂಡಿಸುವಂತೆ ಒತ್ತಾಯ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ನಾಳೆ ಪ್ರಾರಂಭ ಮಾಡೋಣ. ಅವರು ಅದರ ಬಗ್ಗೆ ವಿವರಿಸಬೇಕು. ಅದರ ಬಗ್ಗೆ ನಮ್ಮದು ಕೆಲವು ಪ್ರಿಲಿಮಿನರಿ ಅಬ್ಜೆಕ್ಷನ್ಸ್ ಇವೆ. ಅದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಆದ್ದರಿಂದ ಅದನ್ನು ನಾಳೆ ದಿವಸ ಇಟ್ಟುಕೊಳ್ಳೋಣ.

(ಗೊಂದಲ)

ಡಾ: ಜಿ.ಪರಮೇಶ್ವರ್: ನೀವು ಶಿಕ್ಷಣದ ಮೇಲೆ ನಂಬಿಕೆ ಕಳೆದುಕೊಂಡಿದ್ದೀರಿ ಎಂದು ತೋರುತ್ತದೆ. ನೀರಾಗೆ ಆದ್ಯತೆ ಕೊಟ್ಟರೆ ಹೇಗೆ?

ಶ್ರೀ ಜಗದೀಶ್‌ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಅಜೆಂಡಾ ಪ್ರಕಾರ ಮೂರು ಬಿಲ್‌ಗಳನ್ನು ಪಾಸ್ ಮಾಡಿದ್ದೇವೆ. ತಾವು ಐದು ಗಂಟೆಗೆ ನಮಗೆ ಅವಕಾಶ ಕೊಡುವುದಾಗಿ ಹೇಳಿದ್ದೀರಿ.

ಡಾ: ಜಿ.ಪರಮೇಶ್ವರ್: ಅಜೆಂಡಾದಲ್ಲಿ ಅಚ್ಚಾಗಿದೆ ಮತ್ತು ನಾವು ಅದರ ಪ್ರಕಾರ ಹೋಗಬೇಕಾಗುತ್ತದೆ.

ಅಧ್ಯಕ್ಷರು: ಅವರು ಪ್ರಾರಂಭಮಾಡಿ ಐದು ನಿಮಿಷ ಮಾತನಾಡಲಿ. ಆಮೇಲೆ ಬೇಕಾದರೆ ತೆಗೆದುಕೊಳ್ಳೋಣ. ನಾನು ಆಮೇಲೆ ಅವಕಾಶ ಕೊಡುತ್ತೇನೆ.

ಶ್ರೀ ಡಿ.ಪಿ.ಸದಾನಂದಗೌಡ: ನಾಳೆ ಅದನ್ನು ಚರ್ಚೆ ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್: ನಮ್ಮದು ಪ್ರಿಲಿಮಿನರಿ ಅಬ್ಜೆಕ್ಷನ್ ಇದೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ ಅಜೆಂಡಾ ಪ್ರಕಾರ ಹೋಗಿದ್ದರೆ ಮಾನ್ಯ ಸಗೀರ್ ಅಹಮದ್ ಅವರು ಬಿಲ್ಲನ್ನು ಮಂಡಿಸಬೇಕಾಗಿತ್ತು. ಅವರು ಹಾಗೆ ಮಾಡಿದ್ದರೆ ಈ ಬಿಲ್ ಇವತ್ತು ಬರುತ್ತಿರಲಿಲ್ಲವೆಂಬುದು ನಮಗೆಲ್ಲರೂ ಅರ್ಥವಾಗುತ್ತದೆ.

ಅಧ್ಯಕ್ಷರು: ಅವರ ಇಲಾಖೆಗೆ ಸಂಬಂಧಪಟ್ಟಂತೆ ಕಾರ್ಯಕ್ರಮ ಇದೆಯೆಂದು ಹೇಳಿ

ಅವರು ಹೋಗಿದ್ದಾರೆ. ನಾಳೆ ಅದನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅದಕ್ಕೇ ನಾನು ಹೇಳಿದ್ದು, ಅಜೆಂಡಾ ಪ್ರಕಾರ ಹೋಗಿದ್ದರೆ ಅದು ಬರುತ್ತಿತ್ತು, ಇದು ಬರುತ್ತಿರಲಿಲ್ಲ. ಆದ್ದರಿಂದ ನಾಳೆ ಅದನ್ನು ತೆಗೆದುಕೊಳ್ಳೋಣ ಎಂದು ನಾವು ಏನಂತಿ ಮಾಡಿಕೊಳ್ಳುತ್ತಿದ್ದೇವೆ.

ಅಧ್ಯಕ್ಷರು: ಐದು ನಿಮಿಷ ಮಾತನಾಡಿದರೆ ಏನಾಗುತ್ತದೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈಗ ಐದು ನಿಮಿಷ ಮಾತನಾಡಿ, ನಾಳೆ ಪುನಃ ಮಾತನಾಡುವುದು ಎಂದರೆ ಅದು ಡೀಲಿಂಕ್ ಆಗುತ್ತದೆ.

ಅಧ್ಯಕ್ಷರು: ಡೀಲಿಂಕ್ ಏನೂ ಆಗುವುದಿಲ್ಲ. ಮಾತನಾಡುವವರು ಬೇಕಾದಷ್ಟು ಜನ ಇದ್ದಾರೆ. ಅವರು ಪ್ರಾರಂಭ ಮಾಡಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾಳೆ ತೆಗೆದುಕೊಳ್ಳಿ, ಐದು ನಿಮಿಷದಲ್ಲಿ ಏನು ವ್ಯತ್ಯಾಸ ಆಗುತ್ತದೆ?

(ಗೊಂದಲ)

ಅಧ್ಯಕ್ಷರು: ಅವರು ಐದು ನಿಮಿಷ ಮಾತನಾಡಲಿ. ಆಮೇಲೆ ಬೇಕಾದರೆ ನೋಡೋಣ.

ಶ್ರೀ ಎಸ್.ಸುರೇಶಕುಮಾರ್: ಅವರು ಮಾತನಾಡುವುದಕ್ಕೆ ಮುಂಚೆ ನಾನು ತಮ್ಮ ಗಮನಕ್ಕೆ ಒಂದು ಅಂಶವನ್ನು ತರುತ್ತಿದ್ದೇನೆ. ತಮ್ಮ ಕಚೇರಿಗೆ ಈಗಾಗಲೇ ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ತಿದ್ದುಪಡಿಯನ್ನು ನಾವು ಕಳುಹಿಸಿದ್ದೇವೆ. ಈ ತಿದ್ದುಪಡಿ ಎಲ್ಲಾ ಸದಸ್ಯರಿಗೆ ಸರ್ಕ್ಯುಲೇಟ್ ಆಗಬೇಕು. ಅದಾದ ಮೇಲೆ ಈ ಬಿಲ್ಲನ್ನು ತೆಗೆದುಕೊಳ್ಳುವುದು ಮಂಡಿಸುವುದು ಅದೆಲ್ಲಾ ಆಗುತ್ತದೆ.

SRI D.B.CHANDRE GOWDA: It is at the consideration stage. At least he has to move that the Bill be taken into consideration. Then it becomes the property of the House. ಆಮೇಲೆ ನೀವು ತಿದ್ದುಪಡಿಯನ್ನು ಕಳುಹಿಸಬಹುದು. ನೀವು ತಿದ್ದುಪಡಿಯನ್ನು ಕಳುಹಿಸಿದ್ದೀರಿ ಎಂದರೆ ಬಿಲ್ ಮಂಡಿಸಿದ್ದಕ್ಕೆ ಒಪ್ಪಿಕೊಂಡ ಹಾಗೆ ಆಗುತ್ತದೆ.

ಅಧ್ಯಕ್ಷರು: ಅವರು ಐದು ನಿಮಿಷ ಮಾತನಾಡಲಿ. ನೀವು ತಿದ್ದುಪಡಿಯನ್ನು

ಕಳುಹಿಸಿದ್ದೀರಿ. ಅದನ್ನು ಸರ್ಕ್ಯುಲೇಟ್ ಮಾಡೋಣ. ಬಿಲ್ ಮೇಲೆ ಮಾತನಾಡುವವರು ಬಹಳ ಜನ ಇದ್ದಾರೆ. ಈಗ ತಾವು ಪ್ರಾರಂಭ ಮಾಡಿ.

ಡಾ: ಜಿ.ಪರಮೇಶ್ವರ್: 2001ನೇ ಸಾಲಿನ ಕರ್ನಾಟಕ ರಾಜ್ಯ ಪಶ್ವವಿದ್ಯಾನಿಲಯಗಳ ವಿಧೇಯಕವನ್ನು ಜಂಟಿ ಸಲಹಾಸಮಿತಿ.....

(ಗೊಂದಲ)

ಶ್ರೀ ಜಗದೀಶ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಒಂದು ನಿಮಿಷ. ಇಲ್ಲಿ ಟೆಕ್ನಿಕಲ್ ಆಗಿ ಅಬ್ಜೆಕ್ಷನ್ ಇದೆ. ಅಜೆಂಡಾದಲ್ಲಿ 'ವಿಧೇಯಕವನ್ನು ಮಂಡಿಸುವುದು' ಎಂದು ಇದೆ. ಈಗ ಸಹಕಾರ ಸಂಘಗಳ ಬಗ್ಗೆ ಮಂಡನೆ ಆಯಿತು. ಮುಂದಿನ ಅಜೆಂಡಾ ಆಗಿ ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು ಎಂದು ಇದೆ. ಅದರಲ್ಲಿ ಐಟಮ್ ನಂಬರ್ 5ರಲ್ಲಿ ಈ ಬಿಲ್ ಇದೆ. ಅಂದರೆ ಈ ಕರ್ನಾಟಕ ರಾಜ್ಯ ಪಶ್ವವಿದ್ಯಾನಿಲಯಗಳ ವಿಧೇಯಕವನ್ನು ಪರ್ಯಾಲೋಚನೆ ಮಾಡುವುದೋ ಅಥವಾ ಅಂಗೀಕರಿಸುವುದೋ?

ಅಧ್ಯಕ್ಷರು: ಪರ್ಯಾಲೋಚನೆ ಮಾಡಿ ಅಂಗೀಕರಿಸುವುದು.

ಶ್ರೀ ಜಗದೀಶ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ಒಂದು ಸ್ಟೇಜ್ ಓವರ್‌ಲುಕ್ ಆಗಿದೆ. ಮೊದಲು ಮಂಡನೆಯೆಂದು ಆಗಬೇಕಲ್ಲ?

ಅಧ್ಯಕ್ಷರು: ಅದು ಮಂಡನೆಯಾಗಿದೆ.

ಶ್ರೀ ಜಗದೀಶ ಶೆಟ್ಟರ್: ಯಾವಾಗ ಮಂಡನೆಯಾಗಿದೆ? ಇಲ್ಲಿ ಸ್ವಲ್ಪ ಸಮಸ್ಯೆ ಇದೆ.

ಅಧ್ಯಕ್ಷರು: ಒಂದು ನಿಮಿಷ, ಸ್ವಲ್ಪ ಕೇಳಿ. ಹಿಂದೆ ಇದು ಮಂಡನೆಯಾಗಿದೆ. ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಿ ಇದು ವಾಪಸ್ಸು ಬಂದಿರುವುದು.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್: ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಈಗ ಮಂಡನೆಯ ಪ್ರಶ್ನೆ ಬರುವುದಿಲ್ಲ.

ಶ್ರೀ ಜಗದೀಶ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಹಾಗಾದರೆ ಹಿಂದಿನ ಅಧಿವೇಶನದಲ್ಲಿ ಮಂಡನೆ ಮಾಡಿದ್ದಾರೆ. ಈಗ ಮತ್ತೆ ಮಂಡನೆ ಮಾಡುವ ಅವಶ್ಯಕತೆ ಇಲ್ಲವೆಂದು ತಾವು ಹೇಳುತ್ತಿದ್ದೀರಿ. ಹಾಗಾದರೆ ಈ ಹಿಂದಿನ ಬಿಲ್‌ಗೆ ಮತ್ತು ಇವತ್ತಿನ ಬಿಲ್‌ಗೆ ಯಾವ

ಸೆಕ್ಷನ್, ಯಾವ ಶಬ್ದ ವ್ಯತ್ಯಾಸ ಆಗಿದೆಯೆಂದು ಹೇಳುತ್ತೀರಾ?

ಅಧ್ಯಕ್ಷರು: ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಜಗದೀಶ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೇ, ಹಿಂದಿನ ಬಿಲ್ ಜಂಟಿ ಸಲಹಾ ಸಮಿತಿಗೆ ಹೋಯಿತು. ಅಲ್ಲಿಂದ ಬರುವಾಗ ಅದು ರೂಪಾಂತರ ಆಗಿದೆಯೇ ಅಥವಾ ಮೊದಲು ಇದ್ದ ಹಾಗೆ ಬಂದಿದೆಯಾ? ಇದು ತಾಂತ್ರಿಕವಾಗಿ ಒಂದು ಸಮಸ್ಯೆ ಇದೆ. ಇದರ ಬಗ್ಗೆ ಅವರು ಕ್ಲಾರಿಫೈ ಮಾಡಲಿ.

(ಗೊಂದಲ)

ಶ್ರೀ ವಿಜಯಕುಮಾರ ಶೆಟ್ಟಿ: ಮಾನ್ಯ ಅಧ್ಯಕ್ಷರೇ, ಇದು ಹಿಂದೆ ಮಂಡನೆಯಾಗಿದೆ. ಇವರು ಕುಂಟು ನೆಪ ಹೇಳಿಕೊಂಡು ಹೋಗುವುದು ಸರಿಯಲ್ಲ....

ಅಧ್ಯಕ್ಷರು: ನಿಮ್ಮ ಮಂತ್ರಿಗಳು ಎದ್ದು ನಿಂತಿದ್ದಾರೆ.

ಶ್ರೀ ವಿಜಯಕುಮಾರ್ ಶೆಟ್ಟಿ: ಅವರು ಐದೈದು ಜನ ಮಾತನಾಡುತ್ತಾರೆ. ನಾವೂ ಮಾತನಾಡುವುದು ಬೇಡವಾ?

ಅಧ್ಯಕ್ಷರು: ನಿಮ್ಮ ಮಂತ್ರಿಗಳು ನಿಂತಿದ್ದಾರೆ. ನಿಮ್ಮ ಮಂತ್ರಿಗಳು ಎದ್ದು ನಿಂತಾಗ ನಾನು ನಿಮಗೆ ಅವಕಾಶವನ್ನು ಹೇಗೆ ಕೊಡಲಿ?

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ, there are various stages so far as the Bills are concerned. ಇದು ಮೊದಲು ಇಲ್ಲಿ ಮಂಡನೆಯಾದ ಸಮಯದಲ್ಲಿ ಕೂಡ ಅವರ ಕಡೆಯಿಂದ ಒತ್ತಾಯ ಬಂತು, ಇದು ಜಂಟಿ ಸಲಹಾ ಸಮಿತಿಗೆ ಕಳುಹಿಸಬೇಕು ಎಂದು. ಜಂಟಿ ಸಲಹಾ ಸಮಿತಿಗೆ ಕಳುಹಿಸಿದಮೇಲೆ ಅಲ್ಲಿ ನಡೆದಿರತಕ್ಕಂಥ ವ್ಯಾಖ್ಯಾನಗಳೆಲ್ಲಾ ಆಗಿ ಈ ಸದನದಲ್ಲಿ ಸಲಹಾ ಸಮಿತಿಯ ವರದಿಯ ಮಂಡನೆ ಕಾಲಕ್ಕೆ ಸಾಕಷ್ಟು ವಿರೋಧವನ್ನು ವಿರೋಧ ಪಕ್ಷದ ಮುಖಂಡರುಗಳು ಅಭಿವ್ಯಕ್ತ ಮಾಡಿದ್ದಾರೆ. ಆದರೆ ನನ್ನ ಅನುಭವದ ಆಧಾರದಮೇಲೆ - it is the first and fundamental duty of this House to take notice of a report coming out of the Joint Select Committee. ಆದ್ದರಿಂದ ಜಂಟಿ ಸಲಹಾ ಸಮಿತಿಯ ವರದಿಯನ್ನು ಮಂಡನೆ ಮಾಡಿದ ಮೇಲೆ, ಅದನ್ನು ಮಂಡನೆ ಮಾಡುವುದೇ ಅಪರಾಧ ಎಂದು ಹೇಳಿ ಸಾಕಷ್ಟು ವ್ಯಾಖ್ಯಾನಗಳು ಆಗಿ ಸಭಾತ್ಯಾಗ ಮಾಡಿದರು ಮತ್ತು ಅದು ನಂತರ ಮಂಡನೆಯಾಗಿದೆ.

ಮಂಡನೆಯಾದ ಮೇಲೆ introduction of the Bill ಆದು ಆಗಬೇಕು. ಅದನ್ನೂ ಕೂಡ ಅವರು ಮಾಡಿದ್ದಾರೆ. ಈಗ we are at the stage of the consideration.

(ಗೊಂದಲ)

ಅಧ್ಯಕ್ಷರು: ಒಬ್ಬೊಬ್ಬರಾಗಿ ಮಾತನಾಡಿ.

ಶ್ರೀ ಡಿ.ಪಿ.ಸದಾನಂದಗೌಡ(ಸೂಳ್ಯ): ಜಂಟಿ ಸಲಹಾ ವರದಿಯನ್ನು ಮಂಡನೆ ಮಾಡಿದ್ದಾರೆ. ಈಗ ಎರಡು ಪ್ರಶ್ನೆಗಳು ಬಂದಿರುವುದು ಏನೆಂದರೆ ಒರಿಜಿನಲ್ ಬಿಲ್ ಜಂಟಿ ಸಲಹಾ ಸಮಿತಿಯ ವರದಿ ಬಂದ ಮೇಲೆ ರೂಪಾಂತರವಾಗಿದೆ. ಹಾಗೆ ರೂಪಾಂತರ ಆದ ಮೇಲೆ ಆ ಬಿಲ್ಲನ್ನು ಏನು ಮಂಡನೆ ಮಾಡಬೇಕಿತ್ತು ಅದನ್ನು ಇವರು ಮಂಡನೆ ಮಾಡಿದ್ದಾರಾ? ಈಗ ಒರಿಜಿನಲ್ ಬಿಲ್ಲನ್ನು ಕಳೆದ ಅಧಿವೇಶನದಲ್ಲಿ ಮಂಡನೆ ಮಾಡಿದ್ದಾರೆ. ಅದರ ನಂತರ ಜಂಟಿ ಸಲಹಾ ಸಮಿತಿಯ ವರದಿ ಬಂದಿತು. ಆ ವರದಿಯನ್ನೂ ಸಹ ಮಂಡನೆ ಮಾಡಿದ್ದಾರೆ. ಆ ವರದಿಯನ್ನು ಮಂಡನೆ ಮಾಡಿದ ಮೇಲೆ ಈಗ ರೂಪಾಂತರವಾದ ಬಿಲ್ಲನ್ನು ಸದನದಲ್ಲಿ ಮಂಡನೆ ಮಾಡಬೇಕಲ್ಲಾ? ಇದು ಒರಿಜಿನಲ್ ಬಿಲ್ ಬಗ್ಗೆ ಅಥವಾ ವರದಿ ಬಗ್ಗೆ ನಾವು ಚರ್ಚೆ ಮಾಡುತ್ತಿರುವುದಾ? ಈ ಬಿಲ್ ಬಗ್ಗೆ ಚರ್ಚೆ ಆಗಬೇಕಾದರೆ ಮೊದಲು ಇಲ್ಲಿ ಬಿಲ್‌ನ ಮಂಡನೆಯಾಗಬೇಕು.

5.00 ಪಿ.ಎಂ.

ಇದು ಟೆಕ್ನಿಕಲ್ ಪಾಯಿಂಟ್. ಏಕೆಂದರೆ, ನಾಳೆ ಯಾರಾದರೂ ಕೋರ್ಟಿಗೆ ಹೋಗಿ ಮತ್ತೆ ಇದರಲ್ಲಿ ವ್ಯತ್ಯಾಸಗಳಾಗಬಾರದು ಎಂಬ ಹಿನ್ನೆಲೆಯಲ್ಲಿ ನಾನು ಹೇಳುತ್ತಿದ್ದೇನೆ. Original Bill has been presented. The report of the Joint Select Committee is also presented before the House. ಆಲ್ಟರೇಷನ್ ಆದಂಥಾದ್ದು ಜಾಯಿಂಟ್ ಸೆಲೆಕ್ಟ್ ಕಮಿಟಿ ಆಧಾರದಲ್ಲಿರುವಂಥ ಬಿಲ್ಲು ಈ ಸದನದಲ್ಲಿ ಮಂಡನೆಯಾಗಲಿಲ್ಲ. ಆ ಬಿಲ್ಲನ್ನು ಮಂಡನೆ ಮಾಡಿದರೆ ಮಾತ್ರ ಇಲ್ಲಿ ಪರ್ಯಾಲೋಚನೆ, ಮತ್ತೊಂದು ಮಾಡುವುದಕ್ಕೆ ಅವಕಾಶವಾಗುತ್ತದೆ, ಇಲ್ಲದೇ ಹೋದರೆ ಅವಕಾಶವಾಗುವುದಿಲ್ಲ. ಇವತ್ತು ನಮ್ಮ ಪ್ರಿಲಿಮಿನರಿ ಅಬ್ಜಕ್ಷನ್ಸ್ ಈ ಆಧಾರದಲ್ಲಿಯೇ ಹೊರತು ಬೇರೆ ಆಧಾರದಲ್ಲಿ ಅಲ್ಲ. ಇದನ್ನು ಮಾನ್ಯ ಅಧ್ಯಕ್ಷರು ಆಲೋಚನೆ ಮಾಡಬೇಕು. ಈಗ ಇದು ರೂಪಾಂತರವಾದಂಥ ಬಿಲ್ಲು. ನೀವು ವರದಿ ಕೊಟ್ಟಿದ್ದೀರಿ. ಆದರೆ, ಆ ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿದ್ದಂತಹ ಹಲವಾರು ಸದಸ್ಯರು, ರಾಜೀನಾಮೆ ಕೊಟ್ಟು ಹೊರಗೆ ಬಂದಿದ್ದಾರೆ. ಉಳಿದಂತಹವರು ಮಾತ್ರ ಈ ರಿಪೋರ್ಟ್ ಮಾಡಿದ್ದಾರೆ. ಇದು ಏಕಪಕ್ಷೀಯವಾದಂಥ ತೀರ್ಮಾನವಾಗಿದೆ. ಈ

ಹಿನ್ನೆಲೆಯಲ್ಲಿ ಆ ವರದಿಯನ್ನೂ ಕೂಡ ಒಪ್ಪಿಕೊಳ್ಳುವಂಥ ಸಂದರ್ಭ ಇದಲ್ಲ. ಆದ್ದರಿಂದ, ಈಗ ನಮ್ಮ ಸಬ್‌ಮಿಷನ್ ಏನೆಂದರೆ, ಜಾಯಿಂಟ್ ಸೆಲೆಕ್ಟ್ ಕಮಿಟಿ ಆಧಾರದಲ್ಲಿ ಮಂಡನೆಯಾಗಬೇಕಾದಂಥ ಬಿಲ್ ಮಂಡನೆಯಾಗಬೇಕಾಗಿದೆ. ಆ ಬಿಲ್ ಮಂಡನೆಯಾದರೆ ಮಾತ್ರ ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಆ ಬಿಲ್ಲನ್ನು ಅವರು ಮಂಡನೆ ಮಾಡಬೇಕಾಗಿದೆ. ಅದರ ನಂತರ ನಾವು ಚರ್ಚೆ ಮಾಡಬೇಕಾಗಿದೆ.

SRI JAGADISH SHETTAR(Leader of the opposition): Rule 74 says:

"Publication before introduction: The Speaker may, on request being made to him, order the publication of any Bill (together with the Statement of Objects and Reasons, the memorandum regarding delegation of legislative power and the finance memorandum accompanying it) in the Gazatte, although no motion has been made for leave to introduce the Bill. In that case, it shall not be necessary to move for leave to introduce the Bill and if the Bill is afterwards introduced, it shall not be necessary to publish it again."

ಗೆಜೆಟ್‌ನಲ್ಲಿ ಪಬ್ಲಿಕೇಷನ್ ಆಗಿದ್ದರೆ, ಮಂಡನೆ ಮಾಡತಕ್ಕ ಅವಶ್ಯಕತೆ ಇಲ್ಲ. ಆದರೆ, ಅದು ಯಾವುದೂ ಇಲ್ಲಿ ಪ್ರಸ್ತಾಪ ಇಲ್ಲ. ಹೀಗಾಗಿ ಇದರ ಪ್ರಕಾರ ಅವರು ಹೊಸದಾಗಿ ಬಿಲ್ಲನ್ನು ಇಂಟ್ರಡಕ್ಷನ್ ಮಾಡಿಯೇ ಇಲ್ಲ. ಮೊನ್ನೆ ಕೇವಲ ವರದಿಯನ್ನು ಮಂಡನೆ ಮಾಡಿದ್ದಾರೆ.

ಡಾ॥ ಜಿ.ಪರಮೇಶ್ವರ್: ಬಿಲ್ ನಂ. 37 ಈಗಾಗಲೇ ಇಂಟ್ರಡ್ಯೂಸ್ ಮಾಡಿ ಅದನ್ನು ಪರ್ಯಾಲೋಚನೆಗೆ ಕೇಳಿದ್ದೆವು. ಆ ಸಂದರ್ಭದಲ್ಲಿ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿದ್ದು, ಇದು ಹೊಸ ಬಿಲ್ ಅಲ್ಲ. ತಾವು ದಯಮಾಡಿ, ಜಾಯಿಂಟ್ ಸೆಲೆಕ್ಟ್ ಕಮಿಟಿಯ ವರದಿಯನ್ನು ಓದಬೇಕು. ಜಂಟಿ ಸಲಹಾ ಸಮಿತಿಯ ವರದಿ ಮಾಡಿರುವಂತೆ ಪರ್ಯಾಲೋಚಿಸಬೇಕೆಂದು ಹೇಳಿದ್ದೇವೆ. ಆದ್ದರಿಂದ, ತಾವು ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ಬದಲಾವಣೆಗಳನ್ನು ಏನಾದರೂ ತಂದಿದ್ದರೆ, ಅದನ್ನು ಚರ್ಚೆ ಮಾಡಬಹುದು.

ಶ್ರೀ ಡಿ.ಪಿ.ಸದಾನಂದಗೌಡ: ಅಕಾಡೆಮಿಕ್ ಇಂಟ್ರೆಸ್ಟ್‌ನಲ್ಲಿ ಇದನ್ನು ಚರ್ಚೆ ಮಾಡಬೇಕಾಗಿದೆ. ಅವರು ಏನು ಹೇಳುತ್ತಿದ್ದಾರೆ, ಒರಿಜಿನಲ್ ಬಿಲ್ಲನ್ನು ನಾವು ಮಂಡನೆ ಮಾಡಿದ್ದೇವೆಂದು ಹೇಳಿದ್ದಾರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ, ಕಳೆದ ಅಧಿವೇಶನದಲ್ಲಿ ಅದು ಮಂಡನೆಯಾಗಿದೆ, ಅದು ಪರ್ಯಾಲೋಚನೆಗೆ ಮಾತ್ರ ಬಾಕಿ ಇದೆ. ಆದರೆ, ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಆಗಿದೆ. ಆ ಸಮಿತಿಯವರು ಹಲವಾರು ವರದಿಗಳನ್ನು ಕೊಟ್ಟಿದ್ದಾರೆ. ಹಿಂದಿನ ಬಿಲ್ಲಿಗೆ ಹಲವಾರು ತಿದ್ದುಪಡಿಗಳನ್ನು, ಮತ್ತು ಸ್ವಲ್ಪ ಹೆಚ್ಚು ಕಡಿಮೆ ಮಾಡುವಂಥ ಪ್ರಯತ್ನಗಳನ್ನು ಹೇಳಿದ್ದಾರೆ. ಅವರು ವರದಿಯನ್ನು ಮಂಡನೆ ಮಾಡಿದ್ದಾರೆ, ಹಾಗಾದರೆ ನಾವು ಆ ವರದಿಯ ಬಗ್ಗೆ ಚರ್ಚೆ ಮಾಡುವುದೇ? ಈ ರೀತಿ ನೀವು ಹೇಳಿದರೆ, ನಾವು ಒಪ್ಪಿಕ್ಕೊಳ್ಳುತ್ತೇವೆ. ಆದರೆ, ಬಿಲ್ಲಿನ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿದರೆ, ಆ ಜಾಯಿಂಟ್ ಸೆಲೆಕ್ಟ್ ಕಮಿಟಿಯ ಆಧಾರದಲ್ಲಿ ಬದಲಾದಂಥ ಬಿಲ್ ಏನು?

ಶ್ರೀ ಕೆ.ಬಿ.ಮಲ್ಲಿಕಾರ್ಜುನ(ಬೀರೂರು): ಒಂದು ಏಧೇಯಕವನ್ನು ಕಳೆದ ಸದನದಲ್ಲಿ ಮಂಡಿಸಲಾಯಿತು. ಅದರ ಮೇಲೆ ಬಹಳಷ್ಟು ಚರ್ಚೆಗಳು ನಡೆದು, ಪರ್ಯಾಲೋಚನೆ ಸಮಯದಲ್ಲಿ ಅದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಲಾಯಿತು. ಆ ಜಾಯಿಂಟ್ ಸೆಲೆಕ್ಟ್ ಕಮಿಟಿ ಒಂದು ವರದಿಯನ್ನು ಕೊಟ್ಟಿದೆ. ನಾವು ಕೇಳುತ್ತಿರತಕ್ಕ ಪ್ರಶ್ನೆ ಏನೆಂದರೆ, ಹಿಂದಿನ ಏಧೇಯಕ ಸದನದ ಮುಂದೆ ಇದೆ. ಅದನ್ನು ವಾಪಸ್ ತೆಗದುಕೊಂಡಿದ್ದಾರೋ ಅಥವಾ ಏನಾಗಿದೆಯೋ, ಇದು ಯಾರಿಗೂ ಗೊತ್ತಿಲ್ಲ. ಇನ್ನೊಂದು, ಒಂದು ವರದಿಯನ್ನು ಮಂಡನೆ ಮಾಡಿದ್ದಾರೆ. ಆ ವರದಿಯಲ್ಲಿ ಎರಡು ಏಷಯಗಳು ಇವೆ. ಜಾಯಿಂಟ್ ಸೆಲೆಕ್ಟ್ ಕಮಿಟಿ ಶಿಫಾರಸ್ಸಿನಂತೆ ಅಮೆಂಡ್‌ಮೆಂಟನ್ನು ಇಲ್ಲಿ ಮೂವ್ ಮಾಡಿಲ್ಲ. ಇಲ್ಲಿರತಕ್ಕ ಬಿಲ್ ಕಾಂಪ್ರೆಹೆನ್ಸೀವ್ ಬಿಲ್. ಪೂರ್ಣ ಪ್ರಮಾಣದ ಏಧೇಯಕವನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಕಳುಹಿಸಿದ್ದಾರೆ. ಇದನ್ನು ಏಧೇಯಕ ರೂಪವಾಗಿ ತಂದು ಚರ್ಚೆ ಮಾಡಬೇಕಾಗಿರತಕ್ಕಂಥಾದ್ದು, ಹಿಂದಿನ ಏಧೇಯಕವನ್ನು ವಾಪಸ್ ಪಡೆದು, ಇದರ ಮೇಲೆ ಚರ್ಚೆಯಾಗಿ, ಆಮೇಲೆ ಕರ್ನಾಟಕ ವಿಧಾನ ಸಭೆಯ ಇಷ್ಟನೇ ಅಧಿವೇಶನವೆಂದು ಈ ಬಿಲ್ಲನ್ನು ತಂದಾಗ, ಆ ಏಧೇಯಕವನ್ನು ಚರ್ಚೆ ಮಾಡತಕ್ಕಂಥಾದ್ದು ಸೂಕ್ತವಾಗುತ್ತದೆ. ಇವತ್ತು ಜಾಯಿಂಟ್ ಸೆಲೆಕ್ಟ್ ಕಮಿಟ ವರದಿಯೂ ಸದನದ ಮುಂದೆ ಇದೆ. ಹಿಂದಿನ ಬಿಲ್ಲೂ ಸದನದ ಮುಂದೆ ಇದೆ. ಹಾಲಿ ಏಧೇಯಕ ನಮ್ಮ ಮುಂದೆ ಇಲ್ಲ. ಇದರ ಬಗ್ಗೆ ಚರ್ಚೆ ಮಾಡತಕ್ಕಂಥಾದ್ದು ಸೂಕ್ತವಾಗುವುದಿಲ್ಲವೆಂಬುದು ನನ್ನ ಅಭಿಪ್ರಾಯ.

ಶ್ರೀ ಡಿ.ಬಿ.ಚಂದ್ರೇಗೌಡ: ಮೊದಲು ನಾವು ತಿಳಿದುಕೊಳ್ಳಬೇಕಾಗಿರುವುದೇನೆಂದರೆ,

ಈ ಬಿಲ್ ಇನ್ನೂ ಪೆಂಡಿಂಗ್‌ನಲ್ಲಿದೆ. ಯಾವ ಸಂದರ್ಭದಲ್ಲಿ, at the stage of the consideration, the Bill was referred to the Joint Select Committee. Along with the report, the Bill has come before the House. ಒರಿಜಿನಲ್ ಕನ್‌ಸಿಡರೇಷನ್ ಸ್ಟೇಜ್‌ನಲ್ಲಿ ಯಾವಾಗ ಹೋಗಿತ್ತು, ಪುನಃ ಅದನ್ನು ಕನ್‌ಸಿಡರೇಷನ್ ಮಾಡಿ ಎಂದು ಹೇಳಬೇಕಾದ್ದಿಲ್ಲ. At best, they can take one objection. Let me quote page No. 505 of the Practice & Procedure'.

"In case the member in charge seeks to move that the Bill as reported by the Joint Select Committee be taken into consideration, any Member may object to the Motion being made on the ground that the copies of the report of the Committee as required, have not been made available to the Members at least 2 days before the day on which the Motion is made."

That is the one objection they can take. That objection is not there.

"....But, the Speaker may allow the report of the Committee be taken into consideration in the urgent cases."

We are at that stage.

"The debate of the motion "That the Bill as reported by the Select Committee or the Joint Committee be taken into consideration." is confined to the consideration of the report of the Committee and the matter referred to therein."

So, the introduction of the Bill stage is over. Now, it has come back after the consideration by the Joint Select Committee and it is placed before the House.

"... of the Committee and the matter referred to therein. But, Members can advance any alternative suggestions consistent to the principles of the Bill. It has been ruled that the scope of the discussion on the Bill is limited to Bill as reported by the Committee and the principle of the Bill is not open to be discussed again."

This is the situation.

ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ಯಾವ ಸಮಯದಲ್ಲಿ ಬಿಲ್ಲನ್ನು ನಾವು ಕನ್‌ಸಿಡರೇಷನ್‌ಗೆ ತೆಗೆದುಕೊಂಡ ಮೇಲೆ, ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿದ್ದೇವೆ. ಜಾಯಿಂಟ್ ಸೆಲೆಕ್ಟ್ ಕಮಿಟಿ ವರದಿ ಬಂದ ಮೇಲೆ, ಆ ವರದಿ ಸಹಿತ ಚರ್ಚೆಗೆ ತೆಗೆದುಕೊಂಡಿದ್ದೇವೆ. ಈಗ ಪುನಃ ಅದನ್ನು ಇಂಟ್ರಡ್ಯೂಸ್ ಮಾಡಿ ಎಂದು ಹೇಳತಕ್ಕ ಪ್ರಶ್ನೆ ಉದ್ಭವವಾಗುವುದಿಲ್ಲ. Let us be clear on this question. The matter is very clear. Therefore, I would request you to allow the Minister to make submission.

ಶ್ರೀ ಜಗದೀಶ್ ಶೆಟ್ಟರ್: ಅವರು ಕ್ಲಿಯರ್ ಮಾಡಲಿಲ್ಲ. ಅವರಿಗೆ ಏನೂ ಸಮಸ್ಯೆ ಇರಲಿಲ್ಲ, ಮೊದಲೆ ಆ ಬಿಲ್ಲನ್ನು ಮಂಡನೆ ಮಾಡಬಹುದಾಗಿತ್ತು. ಆ ಕೆಲಸವನ್ನು ಮಾಡಲಿಲ್ಲ. ಏಕೆಂದರೆ, ಹಿಂದಿನ ಅಧಿವೇಶನದಲ್ಲಿ ಮಂಡನೆ ಮಾಡಿದ್ದು, ನಂತರ ಜಂಟಿ ಸದನದ ಸಮಿತಿಗೆ ಹೋಗಿತ್ತು. ಹಿಂದಿನ ಬಿಲ್ಲಿನಲ್ಲಿದ್ದಂತಹ ವಿಚಾರಗಳಿಗೆ ಅಂದರೆ ಕೆಲವೊಂದು ವಾಕ್ಯಗಳು ಇರಬಹುದು ಅಥವಾ ಕೆಲವೊಂದು ವಿಷಯಗಳು ಇರಬಹುದು, ಈ ಬಿಲ್ಲಿನಲ್ಲಿ ರೂಪಾಂತರವಾಗಿದೆ. ಈಗ ಇದನ್ನು ಮಂಡನೆ ಮಾಡುವುದು ಬಿಟ್ಟು, ಅವರು ವರದಿಯನ್ನು ಮಂಡನೆ ಮಾಡಿ, ಅದೇ ಬಿಲ್ ಆಗುತ್ತದೆ ಎನ್ನುವುದನ್ನು ನಾವು ಒಪ್ಪುತ್ತಾ ಇಲ್ಲ. ಅದಕ್ಕಾಗಿ, ಮಾನ್ಯ ಅಧ್ಯಕ್ಷರು ಇದರ ಬಗ್ಗೆ ಒಂದು ರೂಲಿಂಗ್ ಕೊಡುವುದು ಒಳ್ಳೆಯದು.

ಶ್ರೀ ಬಿ.ಸೋಮಶೇಖರ್(ಮಳವಳ್ಳಿ): ಇದಕ್ಕೆ ಸಂಬಂಧಪಟ್ಟ ಹಾಗೆ ಅವರು ಹೋದ ಸಾರಿ ಒಂದು ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿದರು. ಅದನ್ನು ಮಂಡನೆ ಮಾಡಿದ ಮೇಲೆ, ಕನ್‌ಸಿಡರೇಷನ್‌ಗೂ ಬಂತು. ಅದರ ಬಗ್ಗೆ ಚರ್ಚೆಯಾಗಿ, ಜಂಟಿ ಸದನದ ಮಂಡನೆ ಮಾಡಿದ ಮೇಲೆ, ಕನ್‌ಸಿಡರೇಷನ್‌ಗೂ ಬಂತು. ಅದರ ಬಗ್ಗೆ ಚರ್ಚೆಯಾಗಿ, ಜಂಟಿ ಸದನದ ಸಮಿತಿಗೆ ಕೊಟ್ಟಿದ್ದನ್ನು, ಎಲ್ಲರೂ ಒಪ್ಪಿಕೊಂಡಿದ್ದೇವೆ. ಆ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಕೆಲವು ಮಾರ್ಪಾಡುಗಳ ಜೊತೆಯಲ್ಲಿ ಒಂದು

ವರದಿಯನ್ನು ಕೊಟ್ಟಿದ್ದಾರೆ. It is not a Bill. It is a report of the Joint Select Committee. The contents of the report have to be incorporated in the Bill. Now, the old Bill is pending before the House and the report is also there. Now, what we want is the original Bill incorporating the new changes. The comprehensive Bill with the recommendations of the Joint Select Committee has to be placed before the House. Before us there is no Bill at all, as amended by the House i.e., the Joint Select Committee. ಆದ್ದರಿಂದ, ತಿದ್ದುಪಡಿಯಾದ ಬಿಲ್ಲನ್ನು ತಂದರೆ, ಅದನ್ನು ನಾವು ಚರ್ಚೆ ಮಾಡಬಹುದು. ತಾವು ಹೇಳಿದ್ದೂ ಸರಿ, ಬಿಲ್ ರೆಡಿ ಇದೆಯೆಂದು ಹೇಳಿದಿರಿ, ಅದನ್ನು ಒಪ್ಪಿಕೊಳ್ಳುತ್ತೇವೆ. ಆದರೆ, ಅದನ್ನೇ ನಾವು ಕನ್‌ಸಿಡರ್ ಮಾಡುತ್ತಾ ಇಲ್ಲ. ಹಳೆಯ ಬಿಲ್ಲನ್ನು ನಾವು ಕನ್‌ಸಿಡರ್ ಮಾಡುತ್ತಾ ಇಲ್ಲ. ಇದರ ಜೊತೆಗೆ ವರದಿ ಮೇಲೆ ಇದೆ. It is not a Bill. It is only a report of the Joint Select Committee. The new Bill has to be placed before the House incorporating the changes made that have been made by the Joint Select Committee.

ಶ್ರೀ ಬಿ.ಕೆ.ಚಂದ್ರಶೇಖರ್(ವಾರ್ತಾ ಸಚಿವರು): ಮಾನ್ಯ ಅಧ್ಯಕ್ಷರೆ, ತಾವು ರೂಲ್ 87ನ್ನು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಪರಿಶೀಲನಾ ಅಥವಾ ಸಂಯುಕ್ತ ಪರಿಶೀಲನಾ ಸಮಿತಿಯ ವರದಿಯನ್ನು ಮಂಡಿಸಿದ ತರುವಾಯ ಮಂಡಿಸಬಹುದಾದ ಪ್ರಸ್ತಾವ ಎಂಬ ಬಗ್ಗೆ ಸ್ಪಷ್ಟವಾಗಿದೆ. ವಿಧೇಯಕದ ಮೇಲೆ ಪರಿಶೀಲನಾ ಅಥವಾ ಸಂಯುಕ್ತ ಪರಿಶೀಲನಾ ಸಮಿತಿಯ ಅಂತಿಮ ವರದಿಯನ್ನು ಮಂಡಿಸಿದ ತರುವಾಯ ವಿಧೇಯಕವನ್ನು ಮಂಡಿಸಿರುವ ಸದಸ್ಯನು ಪರಿಶೀಲನಾ ಅಥವಾ ಸಂಯುಕ್ತ ಪರಿಶೀಲನಾ ಸಮಿತಿಯು ವರದಿ ಮಾಡಿದಂಥ ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ಮುಂತಾಗಿ ತಿಳಿಸಲಾಗಿದೆ. There is only one possibility. He may move a motion for consideration of the modified Bill by the Joint Select Committee. ಡಾ:ಪರಮೇಶ್ವರ್‌ರವರು ಮಾಡುತ್ತಿರುವುದು ಅಷ್ಟೇ, ಬೇರೆ ಏನೂ ಇಲ್ಲ. ರೂಲ್ 87ರಲ್ಲಿ ಬಹಳ ಸ್ಪಷ್ಟವಾಗಿದೆ. ತಾವು ಆಗಲೇ ರೂಲಿಂಗ್ ಕೊಟ್ಟಿದ್ದೀರಿ, ಇಲ್ಲಿ ಮಂಡಿಸಿದ್ದನ್ನು ಚರ್ಚೆ ಮಾಡಿದ್ದೀರಿ, ಅನಂತರ ಜಂಟಿ ಪರಿಶೀಲನಾ ಸಮಿತಿಗೆ ಹೋಯಿತು. ಜಂಟಿ ಪರಿಶೀಲನಾ ಸಮಿತಿಯ ವರದಿಯು ಬಂದನಂತರ ವರದಿಯೇ

ಬೇರೆ, ಪಥೇಯಕವೇ ಬೇರೆ ಎಂದು ಅವರು ಇಂಟರ್ ಪ್ರಿಟ್ ಮಾಡುತ್ತಿದ್ದಾರೆ. Rule 87 makes it very clear that there is no distinction between the two. ಅಲ್ಲಿಂದ ಬಂದ ವರದಿಯನ್ನು ಪರ್ಯಾಲೋಚಿಸಬೇಕೆಂದು ಮಾತ್ರ ಸಚಿವರು ಕೇಳಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ರೂಲ್ 87ರಲ್ಲಿ ಬಹಳ ಸ್ಪಷ್ಟವಾಗಿದೆ. ತಾವು ಇದರ ಮೇಲೆ ರೂಲಿಂಗ್ ಕೊಟ್ಟರೆ ಸಾಕು ಎಂದು ನನ್ನ ಅನಿಸಿಕೆ.

B.SOMASHEKHAR:Whether we are disucssing the Joint Select Committee report or the modified Bill? ನಮಗೆ ಅಷ್ಟೇ ಬೇಕಾಗಿರುವುದು.

SRI D.B.CHANDREGOWDA: There are three stages in the Bill. One is referring the Bill to the Select Committee or the Joint Select Committee at the Stage of first consideration when the Bill was moved. That is over i.e., first reading. Then the consideration of the Bill as reported by the Joint Select Committee. This is the 2nd stage. We are at the second stage. He is seeking permission only to take the issue as reported by the Joint Select Commettee. Third stage is adoption of the Bill. We are in the second stage. Let him begin.

SRI B.SOMASHEKHAR: We are not objecting to take up the discussion here. What we want is an amended Bill incorporating the recommendations of the Joint Select Committee. That has to be placed. Then we can discuss. Now, in the absence of the modified Bill, how can you take up the discussion.